ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 29/12/2019

---

### ಸಂಸತ್ ಭವನದಲ್ಲಿ 'ಮಾಹಿತಿ ಮತ್ತು ಸಂವಹನ ಕೇಂದ್ರ'

# ಸಂಸದರಿಗೆ 'ಕಾಲ್ ಸೆಂಟರ್'

ಉ.ವಾ 29/12/19

- ಲೋಕಸಭಾ ಸ್ಪೀಕರ್ ಓಂ ಬಿರ್ಲಾರ ಆಶಯದಂತೆ ಈ ಕೇಂದ್ರ ಪ್ರಾರಂಭ
- ಪ್ರಾಯೋಗಿಕವಾಗಿ ಯಶಸ್ಸು ಕಂಡಿದ್ದ ಕೇಂದ್ರವೀಗ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ

ನವದೆಹಲಿ: ದೇಶದ ಎಲ್ಲಾ ಸಂಸದರಿಗೆ ಆಡಳಿತಾತ್ಮಕವಾಗಿ ನೆರವಾಗುವ ಉದ್ದೇಶದೊಂದಿಗೆ ಸಂಸತ್ ಭವನದಲ್ಲಿ 'ಮಾಹಿತಿ ಮತ್ತು ಸಂವಹನ ಕೇಂದ್ರ' ಎಂಬ ಕಾಲ್ ಸೆಂಟರ್ ಅನ್ನು ಆರಂಭಿಸಲಾಗಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾರವರ ಆಸ್ಥೆಯಿಂದ ಆರಂಭವಾಗಿರುವ ಈ ಕೇಂದ್ರದಿಂದ ಸಂಸದರು, ಕಲಾಪಗಳಲ್ಲಿ ಯಾವುದೇ ವಿಷಯ ಮಂಡನೆ ಮಾಡಬೇಕಿದ್ದಲ್ಲಿ ಅದಕ್ಕೆ ಪೂರಕವಾದ ದಾಖಲೆಗಳನ್ನು ಈ ಕಾಲ್ ಸೆಂಟರ್‌ನ ಸಹಾಯದಿಂದ ಪಡೆಯಬಹುದು. ಜೊತೆಗೆ, ಸರ್ಕಾರದಿಂದ ತಮಗೆ ಬರಬೇಕಿರುವ ಪ್ರಯಾಣ ಭತ್ಯೆಗಳ ಸ್ಥಿತಿಗಳನ್ನು ತಿಳಿಯಬಹುದು. ಹೀಗೆ, ಆಡಳಿತಾತ್ಮಕ ವಿಚಾರ ಸೇರಿದಂತೆ ಹಲವಾರು ರೀತಿಗಳಲ್ಲಿ ಈ ಕೇಂದ್ರ ಸಂಸದರ ನೆರವಿಗೆ ಬರಲಿದೆ.

ಕಳೆದ ತಿಂಗಳು, ಇದನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದು ಅದು ಯಶಸ್ಸು ಕಂಡ ಹಿನ್ನೆಲೆಯಲ್ಲಿ ಈಗ ಪೂರ್ಣ ಪ್ರಮಾಣದಲ್ಲಿ ಇದನ್ನು ಚಾಲ್ತಿಗೆ ತರಲಾಗಿದೆ.

**ಸ್ವರೂಪ ಹೇಗಿದೆ?:** ಈ ಕಾಲ್ ಸೆಂಟರ್ ಸಂಸತ್ ಭವನದ 13ನೇ ಕೊಠಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರ ಜವಾಬ್ದಾರಿಯನ್ನು ಮೂವರು ಅಧಿಕಾರಿಗಳಿಗೆ ವಹಿಸಲಾಗಿದೆ. ಜತೆಗೆ, ಒಬ್ಬ ಮುಖ್ಯ ಸಂಯೋಜನಾಧಿಕಾರಿ, ಅವರ ಅಧೀನದಲ್ಲಿ ಕೆಲವಾರು ಸಹ-ಸಂಯೋಜನಾಧಿಕಾರಿಗಳು, ನೋಡಲ್ ಅಧಿಕಾರಿಗಳು ಇದ್ದಾರೆ. ಸಂಸದರು ಕಾಲ್ ಸೆಂಟರ್‌ನಲ್ಲಿ ತಮಗೆ ಬೇಕಾದ ಮಾಹಿತಿಯನ್ನು ಪಡೆಯಲು ತಮ್ಮವರೇ ಆದ ವ್ಯಕ್ತಿಯೊಬ್ಬರನ್ನು ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಆ ವ್ಯಕ್ತಿ ಸಂಸದರ ಪರವಾಗಿ ಅಗತ್ಯ ಮಾಹಿತಿಯನ್ನು ಕಾಲ್‌ಸೆಂಟರ್ ಮೂಲಕ ಪಡೆಯಬಹುದು.